ದಿನಾಂಕ ಃ **29-10-2018** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿ.ಎಫ್.ಪಿ ವಾದಿ ಪರ ವಕೀಲರಿಂದಃ

ನಾನು 5 ನೇ ತರಗತಿ ತನಕ ಓದಿರುತ್ತೇನೆ. ಈ ದಾವೆಯಲ್ಲಿ 1 ನೇ ಪ್ರತಿವಾದಿ ಸಾಕ್ಷಿ ಹೇಳಲು ನನ್ನನ್ನು ಕೇಳಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ತಯಾರು ಮಾಡಲು ವಕೀಲರು ಮಾಹಿತಿ ಕೊಟ್ಟರು. ಈ ದಾವೆಯಲ್ಲಿ ಶಿವಾಜಿ, ನಾಗರಾಜ ವಾದಿ ಆಗಿರುತ್ತಾರೆ ಹಾಗೂ ಸುರೇಶ ಇವರು ಪ್ರತಿವಾದಿ ಆಗಿರುತ್ತಾರೆ. ಈ ದಾವೆಯಲ್ಲಿ ವಾದಿ ಯಾವ ಪರಿಹಾರ ಕೋರಿ ಹೂಡಿರುತ್ತಾರೆ ನನಗೆ ಮಾಹಿತಿ ಇಲ್ಲ. ಈ ದಾವೆಯಲ್ಲಿ ದಾವಾ ಆಸ್ತಿ ಯಾವ ಯಾವುದು ಎಂದರೆ ಸಾಕ್ಷಿ ಸರ್ವೆ ನಂ 187 ಹಾಗೂ ನಮ್ಮ ಊರಿನಲ್ಲಿ ಇರುವ ಒಂದು ಮನೆ ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ಜಮೀನಿನ ಸರ್ವೆ ನಂ 186 ರ ಪಕ್ಕ ಈ ದಾವೆಯ ಆಸ್ತಿ ಸರ್ವೆ ನಂ 187 ಇದೆ ಅಂತಾ ಹೇಳಿ ಬರೆಸಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ದಾವಾ ಅಸ್ತಿ ವಾದಿ ಪ್ರತಿವಾದಿಯರ ಸ್ವಾಧೀನದಲ್ಲಿ ಇದೆ ಅಂತಾ ಹೇಳಿ ಬರೆಸಿದ ಬಗ್ಗೆ ಯಾರು ಯಾರು ಯಾವ ಯಾವ ಭಾಗದಲ್ಲಿ ಸ್ವಾಧೀನದಲ್ಲಿ ಇದ್ದಾರೆ ಅಂತಾ ಹೇಳಲು ಆಗುತ್ತಾ ಎಂದರೆ ಇಲ್ಲ. ನಾನು ನೇಗಿನಹಾಳ ಗ್ರಾಮದಲ್ಲಿ ಖಾಯಂ ವಾಸಿಯಾಗಿದ್ದೇನೆ. ನನ್ನ ಮನೆಯಿಂದ ವಾದಿಯರ ಮನೆ ದೂರ ಆಗುತ್ತದೆ. ನನ್ನ ಮನೆ ನೇಗಿನಹಾಳ ಗ್ರಾಮದ ಬಸ್ ಸ್ಟಾಂಡ ಹತ್ತಿರ ಇದೆ ಹಾಗೂ ವಾದಿಯ ಮನೆ ಊರಿನ ಒಳಗಡೆ ಇದೆ ಎಂದು ಹೇಳುತ್ತಾರೆ. ನಾನು ನೇಗಿನಹಾಳ ಗ್ರಾಮದ ವಾಸಿ ಅಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರು 4-5 ವರ್ಷಗಳಿಂದ ಪರಿಚಯ. ವಾದಿ ಮತ್ತು ಪ್ರತಿವಾದಿಯರು ನನಗೆ ಸಂಬಂಧಿಕರು. ವಾದಿ ಮತ್ತು ಪ್ರತಿವಾದಿಯರ ಆಸ್ತಿ ವಿಚಾರಣೆ ಹಿರೆತನ ನಾನು ಮಾಡಿಲ್ಲ. ವಾದಿ ಸವದತ್ತಿಯಲ್ಲಿ ವಾಸ ಇದ್ದಾರೆ ಅಂತಾ ಯಾವ ಆಧಾರದ ಮೇಲೆ ಹೇಳುತ್ತಿರಾ ಎಂದರೆ ಸಾಕ್ಷಿ ವಾದಿಯರ ತಾಯಿ ಮನೆ ಸವದತ್ತಿ ಈಗ ಇಲ್ಲಿ

ಬಂದು ವಾಸ ಇದ್ದಾರೆ ಎಂದು ಹೇಳುತ್ತಾರೆ. ವಾದಿಯರು ಯಾವ ಮನೆಯಲ್ಲಿ ವಾಸ ಇದ್ದಾರೆ ಹೇಳಲು ಆಗುತ್ತಾ ಎಂದರೆ ಸಾಕ್ಷಿ ಎರಡು ಮನೆಗಳು ಇವೆ ಒಂದರಲ್ಲಿ ವಾದಿ ಹಾಗೂ ಇನ್ನೊಂದರಲ್ಲಿ ಪ್ರತಿವಾದಿಯರು ಇರುತ್ತಾರೆ ಎಂದು ಹೇಳುತ್ತಾರೆ. ವಾದಿಯರು 1 ನೇ ಪ್ರತಿವಾದಿಯ ಮಕ್ಕಳು ಎಂದರೆ ಹೌದು. ವಾದಿಯ ತಾಯಿಯ ಹೆಸರು ಸೀತವ್ವ. ಸೀತವ್ವ 1 ನೇ ಪ್ರತಿವಾದಿ ಸುರೇಶನ ಹೆಂಡತಿ ಎಂದರೆ ಹೌದು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ 1 ನೇ ಪ್ರತಿವಾದಿ ಸುರೇಶನ ಹೆಂಡತಿ ಪ್ರೇಮವ್ವ ಮತ್ತು ಅವಳ ಮಕ್ಕಳು ಈ ಹೊತ್ತಿನವರೆಗೆ ಸಾಗು ಮಾಡುತ್ತಾ ಇದ್ದಾರೆ ಅಂತಾ ಯಾವ ಆಧಾರದ ಮೇಲೆ ಬರೆಸಿದ್ದಿರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ಹಾಗೂ ಸೀತವ್ವ ಇವರ ವಿವಾಹ ವಿಚ್ಛೇದನ ಏನಾದರೂ ಆಗಿದೆಯಾ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಪ್ರೇಮವ್ವ ಅಂತಾ ಹೇಳಿ ಬರೆಸಿದ ವ್ಯಕ್ತಿ ಅರ್ಜುನ ಎನ್ನುವವರ ಹೆಂಡತಿ ಎಂದರೆ ಹೌದು ಹಾಗೂ ಅವಳಿಗೆ 4 ಜನ ಮಕ್ಕಳು ಇದ್ದರೆ ಎಂದರೆ ಹೌದು. ಆ ಪ್ರೇಮವ್ವ ಗಂಡನನ್ನು ಬಿಟ್ಟು, 4 ಜನ ಮಕ್ಕಳು ಇದ್ದರೂ ಕೂಡ 1 ನೇ ಪ್ರತಿವಾದಿ ಜೊತೆ ಅನೈತಿಕ ಸಂಬಂಧದಿಂದ ಜೀವನ ಸಾಗಿಸುತ್ತಿದ್ದಾರೆ ಎಂದರೆ ಇಲ್ಲ. 1 ನೇ ಪ್ರತಿವಾದಿ ಜೊತೆ ನನಗೆ ಗೆಳೆತನ ಇದೆ ಆದ್ದರಿಂದ ಆತನ ಪರವಾಗಿ ಬಂದು ಈ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ

(ಚೈತ್ರಾ ಎ. ಎಮ್.)
ಪ್ರ ದ ನ್ಯಾ ದಂ, ಬೈಲಹೊಂಗಲ